ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

ಸಿ ಸಿ ನಂಃ **1709/23**

ಸಾಕ್ಷಿಯ ಹೆಸರುಃ ಕೆ ಎಂ ರಾಮಚಂದ್ರ
ತಂದೆ /ಗಂಡನ ಹೆಸರು ಃ ಕೆ ಸಿ ಮಾದಪ್ಪ
ವಯಸ್ಸು ಃ 54
ಉದ್ಯೋಗ ಃ ವ್ಯಾಪಾರ
ವಾಸ ಸ್ಥಳ ಃ ಕುಶಾಲನಗರ.

ಫ್ರಾಸಾ ಃ 1
ಚಾಸಾ ಃ 1

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **04.07.2024**

ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ

ದಿ 15-06-2023 ರಂದು ನಾನು ಅಂಗಡಿಯಲ್ಲಿರುವಾಗ ನನ್ನ ಹೆಂಡತಿ ಮತ್ತು ಮಗಳು ಭಾವನ ಸಹ ಇದ್ದು ಆಗ ಅಲ್ಲಿಗೆ ಅವಳ ಸ್ನೇಹಿತೆ ನಿಸರ್ಗ ಬಂದು ಕಣ್ಣಿಗೆ ಡ್ರಾಪ್ಸ ತರಲೆಂದು ಅವರ ಸ್ಕೂಟಿನಲ್ಲಿ ನನ್ನ ಮಗಳು ಹೋಗಿರುತ್ತಾಳೆ . ರಾತ್ರಿ 7-45 ಗಂಟೆಗೆ ನನಗೆ ಪರಿಚಯ ಇರುವ ಚಾಸಾ 3 ರವರು ಕರೆ ಮಾಡಿ ಸಿನಿಪ್ಲೆಕ್ಸ್ ಮುಂದೆ ನಿಂತಿರುವಾಗ ನನ್ನ ಮಗಳು ಕುಶಾಲನಗರ ಕಡೆಯಿಂದ ಗುಡ್ಡೆಹೊಸೂರು ಕಡೆಗೆ ಹೋಗುತ್ತಿದ್ದ ಸ್ಕೂಟಿಗೆ ಗುಡ್ಡೆಹೊಸೂರು ಕಡೆಯಿಂದ ಬರುತ್ತಿದ್ದ ಒಂದು ಬುಲೆಟ್ ಬೈಕ್ ಅದರ ಸವಾರ ಅತೀ ವೇಗ ಮತ್ತು ಅಜಾಗರೂಕತೆಯಿಂದ ರಸ್ತೆಯ ಬಲ ಭಾಗಕ್ಕೆ ಚಾಲನೆ ಮಾಡಿ ಸ್ಕೂಟಿಗೆ ಡಿಕ್ಕಿ ಪಡಿಸಿದ್ದರಿಂದ ನನ್ನ ಮಗಳು ಎಡ ಭಾಗಕ್ಕೆ ಹಾಗೂ ಬುಲೆಟ್ ಚಾಲಕ ಬಲ ಭಾಗಕ್ಕೆ ಬಿದ್ದಿರುತ್ತಾರೆ . ಆಗ ಚಾಸಾ 3 ಹಾಗೂ ಸಾರ್ವಜನಿಕರು ಹೋಗಿ ನೋಡಲಾಗಿ ನನ್ನ ಮಗಳು ಹಾಗೂ ನಿಸರ್ಗರವರಿಗೆ ರಕ್ತ ಸ್ರಾವವಾಗಿ ಅವರನ್ನು ಆಟೋದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ . ನಂತರ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದು ನಾನು , ಚಾಸಾ 4 ಮತ್ತು 5 ರವರು ನನ್ನ ಮಗಳು ಹಾಗೂ ಆಕೆಯ ಸ್ನೇಹಿತೆ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದು ಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯೆದಲ್ಲಿ ನನ್ನ ಮಗಳು ಉಸಿರಾಟ ನಿಲ್ಲಿಸಿದ್ದು ನಿಸರ್ಗಳನ್ನು ನಮ್ಮ ಸಂಬಂಧಿಯೊಂದಿಗೆ ಮೈಸೂರಿಗೆ ಕಳುಹಿಸಿಕೊಟ್ಟು ಬೇರೆ ಒಂದು ವಾಹನದಲ್ಲಿ ನನ್ನ ಮಗಳ ಮೃತ ದೇಹವನ್ನು ಕುಶಾಲನಗರ ಸರಕಾರಿ ಆಸ್ಪತ್ರೆಗೆ ತಂದಿರುತ್ತೇವೆ . ನನ್ನ ಮಗಳು ಹಾಗೂ ನಿಸರ್ಗ ಹೋಗಿರುವಂತಹ ಸ್ಕೂಟಿ ಸಂಖ್ಯೆ ಕೆ ಎ 12 ಆರ್ 5488 ಆಗಿರುತ್ತದೆ .

ಬುಲೇಟ್ ಬೈಕ್ ಸಂಖ್ಯೆ ಕೆಎ 45 ಇಬಿ 6493 ಎಂದು ಚಾಸಾ 3 ರವರು ನನಗೆ ತಿಳಿಸಿರುತ್ತಾರೆ . ಆಸ್ಪತ್ರೆಯಲ್ಲಿ ಬೈಕನ ಚಾಲಕ ಸಹ ಚಿಕಿತ್ಸೆ ಪಡೆಯುತ್ತಿದ್ದು ಆತನನ್ನು ಕೇಳಲಾಗಿ ಆತನ ಹೆಸರು ವರುಣ್ ಕುಮಾರ್ ಎಂದು ತಿಳಿಸಿರುತ್ತಾರೆ .

ನಂತರ ನಾನು ದಿ 16-06-2023 ರಂದು ಬೈಕ್ ಸವಾರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ.

ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು .

ಪಾಟಿ ಸವಾಲುಃ 1 ನೇ ಆರೋಪಿಯ ಪರ ಶ್ರೀ ಕೆ ಆರ್ ಜೆ ವಕೀಲರ ಪರ ಶ್ರೀ ಎಂ ಎಸ್ ಆರ್ ವಕೀಲರಿಂದ

ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಕರೆ ಮಾಡಿದ 10 ನಿಮಿಷದಲ್ಲಿ ನಾವು ಆಸ್ಪತ್ರೆಗೆ ಹೋಗಿರುತ್ತೇವೆ. ಚಾಸಾ 3 ರವರು ಅಪಘಾತ ಮಾಡಿದ ಬೈಕ್ ಸಂಖ್ಯೆ ಹಾಗೂ ಚಾಲಕ ಹೆಸರು ನನಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಸಂಬಂಧಿಸಿದಂತೆ ಎಷ್ಟು ಜನ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ 1 ದೂರನ್ನು ನನ್ನ ಹೇಳಿಕೆಯ ಪ್ರಕಾರ ಪೋಲಿಸರು ತಯಾರಿಸಿರುತ್ತಾರೆ. ದೂರನ್ನು ತಯಾರಿಸಿದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ನಿಪಿ 1 ಗಣಕೀಕೃತ ದೂರಾಗಿರುತ್ತದೆ. ಆರೋಪಿ ವಾಹನ ಚಾಲನೆ ಮಾಡಿರುವ ಬಗ್ಗೆ ಮಾಹಿತಿ ಇಲ್ಲದೆ ಇದ್ದರು ಅವರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಸ್ನೇಹಿತೆಯಾದ ಚಾಸಾ 2 ರವರು ಚಲಾಯಿಸುತ್ತಿದ್ದ ತಪ್ಪಿನಿಂದಲೇ ಸದರಿ ಅಪಘಾತವಾಗಿದ್ದು ಆರೋಪಿಯದು ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಯ ವಾಹನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರ ಸ್ವಯಂ ಅಪಘಾತದಿಂದ ಈ ಘಟನೆ ಸಂಭವಿಸಿದೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 2 ನೇ ಆರೋಪಿಯ ಪರ ಶ್ರೀ ಹೆಚ್ ಸಿ ಎಂ ಕೆ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರ ದ ನ್ಯಾ ದಂ, ಕುಶಾಲನಗರ.